C.C– 69/2025
ಪಿ. ಡಬ್ಲೂ –2

ಸಾಕ್ಷಿಯನ್ನು ದಿಃ 04.12.2025 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿತನ ಪರ ವಕೀಲರಾದ ಶ್ರೀ. ಎಂ.ಎ.ಬಿ ರವರಿಂದಃ**

4,50,000/– ರೂ. ಹಣವು ನನಗೆ ತೃಪ್ತಿದಾಯಕವಾದ ಕಾರಣ ನಾನು ಆರೋಪಿತನ ಪರವಾಗಿ ಕ್ರಯ ಪತ್ರವನ್ನು ಬರೆದು ನೊಂದಣಿ ಮಾಡಿಸಿದ್ದೇನೆ ಎಂದರೆ ಸರಿ. ಆ ಸಂದರ್ಭದಲ್ಲಿ ಕ್ರಯ ಪತ್ರದ ಶೆಡ್ಯೂಲ್ ಸ್ವತ್ತಿನ ಸರ್ಕಾರಿ ಮೌಲ್ಯ 4,50,000/–ರೂ. ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯ ಪತ್ರದ ಶೆಡ್ಯೂಲ್ ಸ್ವತ್ತಿನ ಮಾರುಕಟ್ಟೆ ಮೌಲ್ಯ ಹೆಚ್ಚಾಗಿದೆ ಎಂದರೆ ಸರಿ. ಸದರಿ ಸ್ವತ್ತಿನ ಪಕ್ಕದ ನಿವೇಶನವು ಹೆಚ್ಚಿನ ಬೆಲೆಗೆ ಮಾರಾಟವಾಯಿತು ಎಂದರೆ ನನಗೆ ಗೊತ್ತಿಲ್ಲ. ಈಗ ನಾನು ಆರೋಪಿತನಿಗೆ ಈಗಿನ ಮಾರುಕಟ್ಟೆ ಮೌಲ್ಯದ ಅನುಸಾರ ಸದರಿ ನಿವೇಶನವನ್ನು ಮಾರಾಟ ಮಾಡಲು ಇಚ್ಚಿಸುವುದಿಲ್ಲ. ಏಕೆಂದರೆ ಅವನು ನನಗೆ ಮೋಸ ಮಾಡಿದ್ದಾನೆ.

ನನ್ನ ಮಗ ಸುಮಂತ ಈಗ ಹೊರದೇಶದಲ್ಲಿ ಇದ್ದಾನೆ ಎಂದರೆ ಸರಿಯಲ್ಲ. ನಿಪಿ–1 ಅನ್ನು ಬ್ಯಾಂಕಿಗೆ ಹಾಜರು ಪಡಿಸಿದಾಗ ನನ್ನ ಮಗ ಚೆಕ್ ಅನ್ನು ಹಾಜರುಪಡಿಸಲು ಕೊಟ್ಟು ನಂತರ ಬೆಂಗಳೂರಿಗೆ ಹೋದನು. ಈ ದೂರನ್ನು ದಾಖಲಿಸುವಾಗಲೂ ಸಹ ನನ್ನ ಮಗ ಬೆಂಗಳೂರಿನಲ್ಲಿ ಇದ್ದ. ಆರೋಪಿತನಿಗೆ ನೋಟೀಸ್ ಅನ್ನು ನಿಪಿ–3 ರಂತೆ ನೀಡಲು ವಕೀಲರಿಗೆ ನಾನೇ ಮಾಹಿತಿಯನ್ನು ನೀಡಿದ್ದೇನೆ. ದೂರನ್ನು ದಾಖಲಿಸಲು ಮಾಹಿತಿಯನ್ನು ವಕೀಲರಿಗೆ ನಾನೇ ಕೊಟ್ಟಿದ್ದೇನೆ. ನೋಟೀಸ್ ಜಾರಿಯಾದ ನಂತರ ಆರೋಪಿತನು ನಮ್ಮ ಮನೆಗೆ ಬಂದಿದ್ದನು ಎಂದರೆ ಸರಿಯಲ್ಲ. ಆಗ ಹೆಚ್ಚಿನ ಹಣವನ್ನು ಕೊಟ್ಟರ ಮಾತ್ರ ನಾನು ಕೇಸನ್ನು ಹಾಕುವುದಿಲ್ಲ ಎಂದು ಹೇಳಿದ್ದೆ ಎನ್ನುವುದು ಸರಿಯಲ್ಲ. ಆರೋಪಿತನು ನನಗೆ 4,50,000/– ರೂ.ಹಣವನ್ನು ಕೊಡುವ ಬಾಧ್ಯತೆ ಹೊಂದಿಲ್ಲ ಎನ್ನುವುದು ಸರಿಯಲ್ಲ. ನಮ್ಮ ನಿವೇಶನವನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಉದ್ದೇಶದಿಂದ ಈ ಕೇಸನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.